RNU AIR DHARWAD

# FEBRUARY 21, 2025
# ALL INDIA RADIO- DHARWAD
# PRADESH SAMACHARA (KANNADA) 12.00 PM

ಗದಗ ತಾಲೂಕಿನ ಆಡಳಿತ ಕೇಂದ್ರ, ಪ್ರಜಾಸೌಧ ಕಟ್ಟಡಕ್ಕೆ, 16 ಕೋಟಿ ರೂಪಾಯಿ, ಚಿಂಚೋಳಿ ತಾಲೂಕಿನ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ, 10 ಕೋಟಿ 91 ಲಕ್ಷ ರೂಪಾಯಿ ನೀಡಲು, ರಾಜ್ಯ ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ ಎಂದು, ಸಂಸದೀಯ ವ್ಯವಹಾರಗಳ ಖಾತೆ ಸಚಿವ, ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ, ಬೆಂಗಳೂರಿನಲ್ಲಿ ನಡೆದ, ಸಚಿವ ಸಂಪುಟ ಸಭೆಯ ಬಳಿಕ, ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದ ಅವರು, ಹಾವೇರಿ ಜಿಲ್ಲೆ, ಶಿಗ್ಗಾಂವಿ ತಾಲೂಕು, ಗುಡ್ಡದ ಚನ್ನಾಪುರದಲ್ಲಿ, ಎರಡು ಎಕರೆ ಗೋಮಾಳವನ್ನು, ಪ್ರತಿ ಚದರ ಮೀಟರ್‌ಗೆ ಸಾವಿರ ರೂಪಾಯಿಯಂತೆ, ಶ್ರೀ ಹೊರ ಬೀರಲಿಂಗೇಶ್ವರ ಸೇವಾ ಸಮಿತಿಗೆ ಮಂಜೂರು ಮಾಡಲು, ಸಚಿವ ಸಂಪುಟ ನಿರ್ಣಯಿಸಿದೆ ಎಂದು, ಸಚಿವ ಎಚ್.ಕೆ. ಪಾಟೀಲ ಹೇಳಿದರು.

<><><>

ಡಿ.ಎಂ.ನಂಜುಂಡಪ್ಪ ಅವರ, ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ವರದಿ ಆಧರಿಸಿ, ಸದ್ಯದ ಮಾನವ ಅಭಿವೃದ್ಧಿ ಸೂಚ್ಯಂಕಕ್ಕೆ ಅನುಗುಣವಾಗಿ, ಹೊಸ ಮಾರ್ಗಸೂಚಿ ಅಗತ್ಯವಿದೆ ಎಂದು, ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಅಧ್ಯಕ್ಷ, ಪ್ರೊಫೆಸರ್ ಎಂ.ಗೋವಿಂದರಾವ್ ತಿಳಿಸಿದ್ದಾರೆ. ಬೆಳಗಾವಿ ಸುವರ್ಣ ವಿಧಾನಸೌಧದ, ಕೇಂದ್ರ ಸಭಾಂಗಣದಲ್ಲಿ ಅವರು ಸುದ್ದಿಗೋಷ್ಠಿ ನಡೆಸಿದರು.

ಪ್ರೊಫೆಸರ್ ಎಂ.ಗೋವಿಂದರಾವ್ ಧ್ವನಿ 40 ಸೆಕೆಂದುಗಳು

<><><>

ರಾಜ್ಯ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬಕ್ಕೆ, ನಗದು ರಹಿತ ಚಿಕಿತ್ಸಾ ಸೌಲಭ್ಯ ಒದಗಿಸುವ, 'ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ' ಜಾರಿ ಕುರಿತು, ಶೀಘ್ರ ಆದೇಶ ಪ್ರಕಟಿಸಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಬೆಂಗಳೂರಿನ ಅರಮನೆ ಮೈದಾನದಲ್ಲಿ ಏರ್ಪಡಿಸಿದ್ದ, ರಾಜ್ಯ ಸರ್ಕಾರಿ ನೌಕರರ ಸಂಘದ, ಚುನಾಯಿತ ನಿರ್ದೇಶಕರು ಹಾಗೂ ಪದಾಧಿಕಾರಿಗಳ ಸಮಾವೇಶಕ್ಕೆ, ವಿಡಿಯೋ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಿ, ಮಾತನಾಡಿದ ಅವರು, N.P.S. ರದ್ದುಪಡಿಸಿ O.P.S. ಜಾರಿಗೊಳಿಸಬೇಕು ಎನ್ನುವ ಸರ್ಕಾರಿ ನೌಕರರ ಬೇಡಿಕೆ ಪರಿಶೀಲಿಸಲು, ಸಮಿತಿ ರಚನೆಯಾಗಿದೆ. ಸಮಿತಿ ವರದಿಯನ್ನಾಧರಿಸಿ, ಕ್ರಮ ಕೈಗೊಳ್ಳಲಾಗುವುದು ಎಂದು, ಮುಖ್ಯಮಂತ್ರಿ ಭರವಸೆ ನೀಡಿದರು.

<><><>

ಧಾರವಾಡ ಜಿಲ್ಲೆಯ, 7 ವಿಧಾನಸಭಾ ಕ್ಷೇತ್ರಗಳಲ್ಲಿ, 138 ಘೋಷಿತ ಕೊಳಚೆ ಪ್ರದೇಶಗಳಿವೆ. ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ, 7 ಸಾವಿರದ 6 ನೂರಾ 92 ಮನೆಗಳು ಮಂಜೂರಾಗಿವೆ ಎಂದು, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಪ್ರಸಾದ ಅಬ್ಬಯ್ಯ ತಿಳಿಸಿದ್ದಾರೆ. ಧಾರವಾಡದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ 2 ಸಾವಿರದ 2 ನೂರಾ 96 ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. 3 ಸಾವಿರದ ನೂರಾ 57 ಮನೆಗಳ ನಿರ್ಮಾಣ ಪ್ರಗತಿಯಲ್ಲಿದೆ. ಬಾಕಿ 2 ಸಾವಿರದ 2 ನೂರಾ 39 ಮನೆಗಳ ನಿರ್ಮಾಣ ಕಾರ್ಯ ಆರಂಭವಾಗಬೇಕಿದೆ ಎಂದರು.

<><><>

ಬಾಗಲಕೋಟೆ ಜಿಲ್ಲೆ, ಮುಧೋಳದಲ್ಲಿ ನಾಳೆಯಿಂದ ಮೂರು ದಿನಗಳ ಕಾಲ ಆಯೋಜಿತ, 'ರನ್ನ ವೈಭವ'ಕ್ಕೆ, ಜಿಲ್ಲಾಡಳಿತ ಸಕಲ ಸಿದ್ಧತೆ ಕೈಗೊಂಡಿದೆ. ನಾಳೆ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ, ಪ್ರವಾಸೋದ್ಯಮ ಖಾತೆ ಸಚಿವ ಎಚ್.ಕೆ.ಪಾಟೀಲ ಚಾಲನೆ ನೀಡಲಿದ್ದಾರೆ. ನಾಳೆ ಬೆಳಗ್ಗೆ 10 ಗಂಟೆಗೆ, ರನ್ನ ಬೆಳಗಲಿಯಲ್ಲಿ, 'ಜಾನಪದ ವಾಹಿನಿ' ಕಲಾ ತಂಡಗಳ ಮೆರವಣಿಗೆಗೆ, ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಚಾಲನೆ ನೀಡಲಿದ್ದಾರೆ. ಈ ಮಧ್ಯೆ, ಚಿತ್ರದುರ್ಗ ನಗರಕ್ಕೆ ಆಗಮಿಸಿದ, ರನ್ನ ರಥ ಯಾತ್ರೆಗೆ, ಜಾನಪದ ಕಲಾಮೇಳಗಳೊಂದಿಗೆ, ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ, ಭವ್ಯ ಸ್ವಾಗತ ಕೋರಿದರು.

<><><>

ಧಾರವಾಡದ ಸೃಜನಾ ರಂಗಮಂದಿರದಲ್ಲಿ ನಾಳೆಯಿಂದ 4 ದಿನಗಳ ಕಾಲ ನಿರ್ದಿಗಂತ ಉತ್ಸವ–2025 ನಡೆಯಲಿದೆ. ನಾಟಕ, ರಂಗಸಂಗೀತ, ಉಪನ್ಯಾಸ, ಕಥೆ, ಕಾವ್ಯದ ಓದು ಸೇರಿದಂತೆ ಹಲವು ವಿಷಯಗಳ ಕುರಿತು ಉತ್ಸವದಲ್ಲಿ ಪ್ರದರ್ಶನ, ಚರ್ಚೆ ಆಯೋಜಿಸಲಾಗಿದೆ.

<><><>

ಧಾರವಾಡ ಜಿಲ್ಲೆ, ಅಳ್ನಾವರ ತಾಲೂಕಿನ, ಕಸ್ತೂರ್‌ಬಾ ಗಾಂಧಿ ಬಾಲಕಿಯರ ವಸತಿ ಶಾಲೆಯ ವಿದ್ಯಾರ್ಥಿನಿಯರಾದ, ಸ್ನೇಹಾ ಮೂಲಿಮನಿ ಹಾಗೂ ಸಾಕ್ಷಿ  ಜಾಂಬೂಟಕರ, 'ಅಮ್ಮಾ ಅಕ್ಷರ ಸಿರಿ' ಕಾರ್ಯಕ್ರಮದಲ್ಲಿ, ರಾಷ್ಟ್ರ ಮಟ್ಟದ ಪ್ರಥಮ ಪುರಸ್ಕಾರ ಗಳಿಸಿದ್ದಾರೆ. ವಿದ್ಯಾಲೋಕ ಮತ್ತು ರೈ ಸ್ವಯಂ ಸೇವಾ ಸಂಸ್ಥೆಯ ಸಹಯೋಗದಲ್ಲಿ, ಬೆಂಗಳೂರಿನ ಎಲ್.ಟಿ.ಐ. ನಲ್ಲಿ ನಡೆದ ಸ್ಪರ್ಧೆಯಲ್ಲಿ, ದೇಶದ ಎಲ್ಲ ವಸತಿ ಶಾಲೆ ಮಕ್ಕಳು ಭಾಗವಹಿಸಿದ್ದರು.

<><><>

ಆಕಾಶವಾಣಿಯ 'ಮನ್ ಕಿ ಬಾತ್' ಕಾರ್ಯಕ್ರಮದ ಮೂಲಕ, ನಾಡಿದ್ದು ಅಂದರೆ ಭಾನುವಾರ ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ದೇಶವಾಸಿಗಳೊಂದಿಗೆ ತಮ್ಮ ಚಿಂತನೆಗಳನ್ನು ಹಂಚಿಕೊಳ್ಳಲಿದ್ದಾರೆ.

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.
ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..

<><><>